ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು 50 ಹಾಸಿಗೆಗಳಿಂದ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಈವರೆಗೂ ನೇತ್ರ ತಜ್ಞ ಹಾಗೂ ಕಿವಿ, ಮೂಗು, ಗಂಟಲು ತಜ್ಞರನ್ನು ನೇಮಕ ಮಾಡಿಲ್ಲದಿರುವುದು ನಿಜವೇ;

ಇ) ಹಾಗಿದ್ದಲ್ಲಿ ಅವರನ್ನು ಯಾವಾಗ ನೇಮಕ ಮಾಡಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ಬಂದಿದೆ.

ಆ) ನಿಜ.

ಇ) ವೈದ್ಯರ ಹುದ್ದೆ ಖಾಲಿಯಾದಾಗ ಮತ್ತು ತಜ್ಞರ ಲಭ್ಯತೆಯ ಮೇರೆಗೆ ನೇಮಕ ಮಾಡಲಾಗುವುದು.

ಶ್ರೀ ಸಾದತ್ ಆಲಿಖಾನ್:- ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದ ಆಸ್ಪತ್ರೆಯಲ್ಲಿ ಹೋದ ವರ್ಷ 100 ಹಾಸಿಗೆಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಎಲ್ಲಾ ರೀತಿಯ ಫೆಸಿಲೀಟಿಸ್ ಇದೆ. ಆದರೆ ಇ.ಎನ್.ಟಿ. ಮತ್ತು eye ಸರ್ಜನ್‌ಗಳು ಇಲ್ಲ. ಆದ್ದರಿಂದ ಈ ಪೋಸ್ಟ್‌ಗಳನ್ನು ತುಂಬಿಕೊಡಿ. I have asked as to when ENT and EYE specialists will be posted. The answer is 'If Doctors posts are vacant, the specialists will be posted when they are available'.

ಅಲ್ಲಿ ಹೊರ ರೋಗಿಗಳಾಗಿ ದಿನಕ್ಕೆ 750 ಜನರು ಬರುತ್ತಾರೆ. ಇಷ್ಟು ಪ್ರಮಾಣದಲ್ಲಿ ಡಿಸ್ಟ್ರಿಕ್ಟ್ ಆಸ್ಪತ್ರೆಗೂ ಬರುವುದಿಲ್ಲ. ಬೆಂಗಳೂರು ಮತ್ತು ಮೈಸೂರು ರೋಡಿನಲ್ಲಿ ದಿನಕ್ಕೆ ಒಂದು ಅಪಘಾತವಾಗುತ್ತದೆ. ಇದಕ್ಕೆ ಹತ್ತಿರವಿರುವ ಆಸ್ಪತ್ರೆ ಎಂದರೆ ಚನ್ನಪಟ್ಟಣದ ಆಸ್ಪತ್ರೆ. ಆದ್ದರಿಂದ ತಕ್ಷಣ ಈ ಎರಡು ಹುದ್ದೆಗಳನ್ನು ತುಂಬಬೇಕೆಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- (ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೇ, ಇ.ಎನ್.ಟಿ. ಮತ್ತು eye ಸ್ಪೆಷಲಿಸ್ಟ್ ಈ ಎರಡು ಹುದ್ದೆಗಳು ಸ್ಯಾಂಕ್ಷನ್ ಆಗಲಿಲ್ಲ. ಆದರೂ ಸಹ ಇಲ್ಲಿ ಎರಡು ಹುದ್ದೆಗಳು ಖಾಲಿ ಇರುವ ಕಾರಣ ನಾವು eye ಮತ್ತು ಇ.ಎನ್.ಟಿ. ಸ್ಪೆಷಲಿಸ್ಟ್ ಇದ್ದಲ್ಲಿ ನಾವು ಅಲ್ಲಿಗೆ ವರ್ಗ ಮಾಡುತ್ತೇವೆ.

ಗುಲ್ಬರ್ಗಾ ಜಿಲ್ಲೆಯ ಪ್ರೌಢಶಾಲೆಗಳಿಗೆ ಶಿಕ್ಷಕರ ಹುದ್ದೆಗಳ ಮಂಜೂರಾತಿ

319 (1596): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):-

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 1990-91 ಸಾಲಿನಲ್ಲಿ 40 ಪ್ರೌಢಶಾಲೆಗಳು ಹಾಗೂ 1991-92ನೇ ಸಾಲಿನಲ್ಲಿ 38 ಪ್ರೌಢಶಾಲೆಗಳು ಒಟ್ಟು 78 ಪ್ರೌಢಶಾಲೆಗಳು ಹೊಸದಾಗಿ ಮಂಜೂರಿ ಮಾಡಿ ಶಿಕ್ಷಕರ ಹುದ್ದೆಗಳು ಮಂಜೂರಿ ಇಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಹೊಸ ಪ್ರೌಢಶಾಲೆಗಳಿಗೆ ಶಿಕ್ಷಕರ ಹುದ್ದೆ ಮಂಜೂರಿ ಇಲ್ಲದೇ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹೊಸದಾಗಿ ಆಗಿರುವ ಪ್ರೌಢಶಾಲೆಗಳು ಇರುವ ಗ್ರಾಮಗಳ ಹಿರಿಯ ಪ್ರಾಥಮಿಕ ಶಾಲೆಗಳಿಂದ ಶಿಕ್ಷಕರನ್ನು ನಿಯೋಜಿಸಿದರೆ ಎರಡೂ ಕಡೆ ವಿದ್ಯಾಭ್ಯಾಸವಾಗದೇ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕುಂಠಿತಗೊಳ್ಳುವುದಿಲ್ಲವೇ;

ಈ) ಈಗಲಾದರೂ ಸಹ ಈ ಶಾಲೆಗಳಿಗೆ ಹುದ್ದೆಗಳನ್ನು ಮಂಜೂರಿ ಮಾಡಿ ಈ ಹೊಸ ಪ್ರೌಢಶಾಲೆಗಳಿಗೆ ಶಿಕ್ಷಕರ ವ್ಯವಸ್ಥೆ ಮಾಡಿ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಆ) ಬಂದಿದೆ.

ಆ) ಇಲ್ಲ.

ಇ) ವಿದ್ಯಾಭ್ಯಾಸ ಕುಂಠಿತವಾಗದಂತೆ ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಮಾತ್ರ ನಿಯೋಜನೆ ಮಾಡಲಾಗುತ್ತದೆ.

ಈ) ಕೈಗೊಳ್ಳಲಾಗುತ್ತಿದೆ

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ 40 ಪ್ರೌಢಶಾಲೆಗಳು ಹಾಗೂ 1991-92ನೇ ಸಾಲಿನಲ್ಲಿ 38 ಪ್ರೌಢಶಾಲೆಗಳು ಒಟ್ಟು 78 ಪ್ರೌಢಶಾಲೆಗಳು ಹೊಸದಾಗಿ ಮಂಜೂರು ಮಾಡಿ, ಶಿಕ್ಷಕರ ಹುದ್ದೆಗಳು ಮಂಜೂರಿ ಇಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಅದಕ್ಕೆ ಉತ್ತರ ಬಂದಿದೆ ಎಂದು ಹೇಳಿದ್ದಾರೆ, ಇವರ ವ್ಯವಸ್ಥೆ ಯಾವಾಗ ಮಾಡುವುದು. ಹೊಸ ಪ್ರೌಢಶಾಲೆಗಳಿಗೆ ಶಿಕ್ಷಕರ ಹುದ್ದೆ ಮಂಜೂರಿ ಇಲ್ಲದೆ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಎಂದರೆ ಉತ್ತರ ಇಲ್ಲವೆಂದು ಹೇಳಿದ್ದಾರೆ. ಅಂದರೆ ಹೊಸದಾಗಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿ ಹುದ್ದೆಗಳನ್ನು ಸೃಷ್ಟಿಸಿಲ್ಲವೆಂಬುದು ನಿಜವಲ್ಲವೇ. ಮೂರನೆಯದಾಗಿ ಹೊಸದಾಗಿ ಆಗಿರುವ ಪ್ರೌಢಶಾಲೆಗಳು ಇರುವ ಗ್ರಾಮಗಳ ಹಿರಿಯ ಪ್ರಾಥಮಿಕ ಶಾಲೆಗಳಿಂದ ಶಿಕ್ಷಕರನ್ನು ಎರಡು ಕಡೆ ನಿಯೋಜಿಸಿದರೆ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕುಂಠಿತಗೊಳ್ಳುವುದಿಲ್ಲವೇ ? ಎಂದರೆ, ಅದಕ್ಕೆ ಉತ್ತರ ವಿದ್ಯಾಭ್ಯಾಸ ಕುಂಠಿತವಾಗದಂತೆ ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಮಾತ್ರ ನಿಯೋಜನೆ ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಗುಲ್ಬರ್ಗದಲ್ಲಿ 250 ಶಿಕ್ಷಕರ ಕೊರತೆ ಇದೆ. ಅದೇ ಪ್ರಕಾರ ಹಿರಿಯ ಪ್ರಾಥಮಿಕ ಶಾಲೆಯಲ್ಲೂ ಸಹ ಶಿಕ್ಷಕರ ಕೊರತೆ ಇದೆ. ನಿಯೋಜನೆ ಮಾಡಲು ಶಿಕ್ಷಕರು ಎಲ್ಲಿಂದ ಬಂದರು ?

ಮಾನ್ಯ ಅಧ್ಯಕ್ಷರು:- ತಾವು ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- ಹೆಚ್ಚುವರಿ ಶಿಕ್ಷಕರು ಬಂದಿದ್ದು ಎಲ್ಲಿಂದ...

ಶ್ರೀ ಡಾ: ಹೆಚ್.ಡಿ. ಲಮಾಣಿ:- ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಹಾಗೆ ಅಲ್ಲಿ 78 ಪ್ರೌಢಶಾಲೆಗಳನ್ನು ಮಂಜೂರು ಮಾಡಿದ ನಂತರ ಅಧ್ಯಾಪಕರ ಹುದ್ದೆಯನ್ನು ಮಂಜೂರು ಮಾಡಲಿಲ್ಲ. ಆದರೆ ಪ್ರೌಢಶಾಲೆಗಳು ನಡೆಯಬೇಕೆಂಬ ದೃಷ್ಟಿಯಿಂದ ಪ್ರಾಥಮಿಕ ಶಾಲೆಯಲ್ಲಿದ್ದಂತಹ